ಝಕಾತ್

29

ಸಹಜೀವಿಗಳೊಂದಿಗೆ ಇರುವ ಬಾಧ್ಯತೆ

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

ಇಸ್ಲಾಮಿನ ಪಂಚ ಸ್ತಂಭಗಳಲ್ಲಿ ಮೂರನೆಯ ಸ್ತಂಭ-ವಾದ ಝಕಾತ್ ತುಂಬಾ ಭಕ್ತಿಯೊಂದಿಗೆ ನಿರ್ವ-ಹಿಸಬೇಕಾದ ಅತಿ ಪ್ರದಾನ ಆರಾಧನಾ ಕರ್ಮವಾಗಿದೆ. ಝಕಾತ್ ಸೃಷ್ಟಿಕರ್ತನಾದ ಅಲ್ಲಾಹನ ಅನುಗ್ರಹಗಳಿಗೆ ಅಂತರಾಳದಲ್ಲಿ ಕೃತಜ್ಞತೆ ಪ್ರಕಟಿಸುವುದು ಮತ್ತು ಈ ಕೃತಜ್ಞತೆಗಾಗಿ ಪರಲೋಕದಲ್ಲಿ ಪ್ರತಿಫಲ ಲಭಿಸುವು-ದು ಪ್ರಸ್ತುತ ಆರಾಧನಾ ಕರ್ಮದ ವೈಶಿಷ್ಟ್ಯವಾಗಿದೆ. ತನ್ನ ವಶದಲ್ಲಿರುವ ಸಂಪತ್ತಿನಿಂದ ಸಮಾಜದಲ್ಲಿರುವ ಸಹ ಜೀವಿಗಳ ಪೈಕಿ ಅರ್ಹರಿಗೆ ಸ್ವಇಚ್ಛೆಯಿಂದ ಪಾಲು ನೀಡಬೇಕಾಗಿದೆ.

ಪ್ರವಾದಿ(ﷺ)ಯವರು ಹೇಳುತ್ತಾರೆ. “ಒಬ್ಬ ವ್ಯಕ್ತಿ ಪುಣ್ಯದ ನಿರೀಕ್ಷೆಯಿಟ್ಟು ಸ್ವಇಚ್ಛೆಯಿಂದ (ಝಕಾತ್) ನೀಡಿದರೆ ಅದರ ಪ್ರತಿಫಲವೂ ಅವನಿಗೆ ಸಿಗುತ್ತದೆ.” (ಅಹ್ಮದ್)

ಇಸ್ಲಾಮಿನಲ್ಲಿರುವ ಝಕಾತ್‌ನ ವ್ಯವಸ್ಥೆ ಶ್ರೀಮಂತರ ಉದಾರತೆಯಿಂದ ಸಿಗುವ ಕೆಲವು ಚಿಲ್ಲರೆ ನಾಣ್ಯಗಳ-

ಲ್ಲ. ಬದಲಾಗಿ ವ್ಯವಸ್ಥಿತವಾಗಿ ನಡೆಯಬೇಕಾದ ಒಂದು ಆರ್ಥಿಕ ವ್ಯವಸ್ಥೆಯಾಗಿದೆ. ಇದನ್ನು ಕ್ಲಪ್ತವಾಗಿ ನಿರ್ವ-ಹಿಸುವ ಮೂಲಕ ಸಮುದಾಯದಲ್ಲಿರುವ ಬಡವರ ಬಡತನವನ್ನು ಪರಿಹರಿಸುವುದರೊಂದಿಗೆ ಅವರನ್ನು ಸ್ವಯಂ ಪರ್ಯಾಪ್ತರನ್ನಾಗಿ ಮಾಡುವುದು ಇಸ್ಲಾಮಿನ ಉದ್ದೇಶವಾಗಿದೆ.

ಇಸ್ಲಾಮಿಕ್ ರಾಷ್ಟ್ರ ಅಸ್ತಿತ್ವದಲ್ಲಿದ್ದರೆ ಅದು ರಾಷ್ಟ್ರದ ವಿವಿಧ ಭಾಗಗಳಿಂದ, ಬೇರೆ ಬೇರೆ ಮೂಲಗಳಿಂದ ದಿನಂಪ್ರತಿ ಸಾರ್ವಜನಿಕ ಖಜಾನೆಗೆ (ಬೈತುಲ್ ಮಾಲ್) ಬರುತ್ತಿರುವ ದಾನದ ಒಂದು ಪಾಲಾಗಿರುತ್ತದೆ. ಇದನ್ನು ಸಂಗ್ರಹಿಸ-ಲು ಹಾಗೂ ಅರ್ಹರಿಗೆ ವಿತರಿಸಲು ಕಚೇರಿ, ನೌಕರರು, ಗೋದಾಮು ಮತ್ತಿತರ ವ್ಯವಸ್ಥೆಗಳು ಅಗತ್ಯವಾಗುತ್ತದೆ. ಝಕಾತ್ ಸಂಗ್ರಹ ಮತ್ತು ವಿತರಣೆಯಲ್ಲಿ ನಿರತರಾದ ನೌಕರರಿಗೆ, ಸಂಗ್ರಹಿಸಲಾದ ಝಕಾತ್‌ನಲ್ಲಿ ಒಂದು ಪಾಲನ್ನು ವೇತನವಾಗಿ ನೀಡಲು ಅಲ್ಲಾಹನೇ ಅನುಮತಿ

ನೀಡಿದ್ದಾನೆ. "ವಲ್ ಆಮಿಲೀನ ಅಲೈಹ" (ಝಕಾತ್ ಸಂಗ್ರಹ ಮತ್ತು ವಿತರಣೆಯಲ್ಲಿ ಏರ್ಪಟ್ಟವರು). ಝಕಾತ್ ರಮದಾನ್ ತಿಂಗಳಲ್ಲಿ, ರಮದಾನ್ ತಿಂಗಳ ಕೊನೆಯ ಹತ್ತರಲ್ಲಿ ಅಥವಾ 27 ನೇ ದಿನ ನೀಡುವ ಕೆಲವು ನಾಣ್ಯಗಳಿಗೆ ಸೀಮಿತವಲ್ಲ ಎನ್ನುವುದು ಸ್ಪಷ್ಟ.

ಝಕಾತನ್ನು ಹೀಗೆ ವ್ಯವಸ್ಥಿತವಾಗಿ ಸಂಗ್ರಹಿಸಿ ವಿತರಿಸುವಾಗ ಅದು ಬಡವರು ಮತ್ತು ಅಗತ್ಯವಿರುವವರ ಅಗತ್ಯಗಳಿಗೆ ಪರಿಹಾರವಾಗಿ ಮಾರ್ಪಡುತ್ತದೆ. ಆಗ ಅನರ್ಹರು ಅದನ್ನು ವಶಪಡಿಸಿಕೊಳ್ಳುವ ಹಾಗೂ ಅರ್ಹರಿಗೆ ಸಿಗದಿರುವ ಸಾಧ್ಯತೆ ತಪ್ಪುತ್ತದೆ. ಝಕಾತನ್ನು ಬಡವರು ಶ್ರೀಮಂತರಿಂದ ಖುದ್ದಾಗಿ ಪಡೆಯುವಾಗ ಉಂಟಾಗುವ ಕೀಳರಿಮೆ ಅಲ್ಲಿರುವುದಿಲ್ಲ. ಬದಲಾಗಿ ಅಧಿಕಾರ ಕೇಂದ್ರಗಳಿಂದ ಅದು ಅಗತ್ಯವಿರುವವರ ಹಕ್ಕು ಎಂಬ ನೆಲೆಯಲ್ಲಿ ವಿತರಿಸಲ್ಪಡುತ್ತದೆ. ಇದು ಬಡವನು ಶ್ರೀಮಂತನ ಮುಂದೆ ವಿಧೇಯತೆಯಿಂದ ನಿಲ್ಲುವುದನ್ನು ತಪ್ಪಿಸುತ್ತದೆ.

ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹು ನಿಶ್ಚಿತ ಪಾಲು ಎಂದು ಹೇಳಿರುವುದನ್ನು ಪ್ರವಾದಿ(ﷺ) ಯವರು ವಿವರಿಸಿ ಕೊಟ್ಟಿದ್ದಾರೆ. ಇದರ ಆಧಾರದಲ್ಲಿ ವಿವಿಧ ಸಂಪತ್ತು ಮತ್ತು ವರಮಾನಗಳಿಂದ ಶೇಕಡ 2.5, 5, 10, 20ರ ಪ್ರಮಾಣದಲ್ಲಿ ಝಕಾತನ್ನು ನಿರ್ಣಯಿಸಲಾಗುತ್ತದೆ. ಝಕಾತ್ ಕೊಡುವ ಸಾಮರ್ಥ್ಯವಿರುವವರು ಸಂಶಯ ಅಥವಾ ಆತಂಕಕ್ಕೆ ಆಸ್ಪದವಿಲ್ಲದಂತೆ ತನ್ನ ಸಂಪತ್ತಿನಿಂದ ತನ್ನ ಪಾಲನ್ನು ಸ್ಪಷ್ಟವಾಗಿ ನಿರ್ಧರಿಸಿ ತೆಗೆದಿಡಲು ಪ್ರಮಾಣದ ಲೆಕ್ಕಾಚಾರವು ಸಹಕಾರಿಯಾಗಿದೆ ಎನ್ನುವುದು ಇದರ ಮತ್ತೊಂದು ವೈಶಿಷ್ಟ್ಯವಾಗಿದೆ.

ಝಕಾತಿನ ಉದ್ದೇಶ ಸಮುದಾಯದ ಸಂಕಷ್ಟ ಮತ್ತು ಅವಶ್ಯಕತೆಗಳನ್ನು ಬಗೆಹರಿಸುವುದಾಗಿದೆ. ಆದರೆ ಅದು ಅರ್ಹರಿಗೆ ಸಿಗದೆ ಶ್ರೀಮಂತರ ಬಳಿ ಉಳಿಯಬಾರದೆಂದು ಇಸ್ಲಾಂ ಆದೇಶಿಸಿದೆ. ಅದಕ್ಕಾಗಿ ಇಸ್ಲಾಂ ವ್ಯವಸ್ಥೆಗಳನ್ನು ಆವಿಷ್ಕರಿಸಿದೆ.

ಒಂದು: ಝಕಾತ್ ನೀಡುವವರಿಗೆ ಪರಲೋಕದಲ್ಲಿ ಸಿಗುವ ಪ್ರತಿಫಲದ ಕುರಿತು ಅವರನ್ನು ಪ್ರಜ್ಞಾವಂತರನ್ನಾಗಿ ಮಾಡುತ್ತದೆ. ಹಾಗೆಯೇ ನೀಡದವರು ಅನುಭವಿಸಬೇಕಾದ ಘೋರ ಶಿಕ್ಷೆ ಮತ್ತು ಅವರ ಸೊತ್ತುಗಳು ಅವರ ವಿರುದ್ಧ ಸಾಕ್ಷಿ ನಿಲ್ಲುವ ರಂಗದ ಕುರಿತು ಎಚ್ಚರಿಕೆ ನೀಡುತ್ತದೆ.

ಎರಡು: ಪರಲೋಕದ ಶಿಕ್ಷೆ ಮತ್ತು ಪ್ರತಿಫಲವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಶ್ರೀಮಂತರು ಝಕಾತ್ ನೀಡಲು ಸಿದ್ಧರಾಗದ ಪರಿಸ್ಥಿತಿ ಉದ್ಭವಿಸಿದರೆ? ಆಡಳಿತ ವರ್ಗಕ್ಕೆ ಅವರಿಂದ ಬಲಾತ್ಕಾರವಾಗಿ ವಶಪಡಿಸಿ ಅರ್ಹರಿಗೆ ತಲುಪಿಸುವ ಅಧಿಕಾರವಿದೆ. ಇತರ ಆರಾಧನಾ ಕರ್ಮಗಳ ವಿಷಯಗಳಲ್ಲಿ ಸ್ವೀಕರಿಸದ ಈ ನಿಲುವನ್ನು ಝಕಾತಿನ ಕಾರ್ಯದಲ್ಲಿ ಮಾತ್ರ ಅನ್ವಯಗೊಳಿಸುವುದರ ಹಿನ್ನೆಲೆಯಲ್ಲಿರುವ ಯುಕ್ತಿ ಎಲ್ಲರಿಗೂ ವೇದ್ಯವಾಗಿದೆ. ಸಮುದಾಯದಲ್ಲಿರುವ ಬಡವರು ಮತ್ತು ದರಿದ್ರರು

ಶ್ರೀಮಂತರು ಪರಲೋಕದ ಪ್ರತಿಫಲವನ್ನು ಮಾತ್ರ ಕಣ್ಣ ಮುಂದಿರಿಸಿ ಅವರು ಕೊಡುವುದನ್ನು ನಿರೀಕ್ಷೆಯಿಂದ ಕಾಯ ಬೇಕಾದವರಲ್ಲ. ಬದಲಾಗಿ ಬಡವರ ಹಕ್ಕನ್ನು ಆದಷ್ಟು ಬೇಗ ಅವರಿಗೆ ತಲುಪಿಸಬೇಕು. ಝುಕಾತ್ ಮೂಲಕ ನಡೆಯಬೇಕಾದ ಇತರ ಇಸ್ಲಾಮಿ ಬೇಡಿಕೆಗಳ ಕಾರ್ಯವೂ ತಥೈವ. ಬಡತನ ನಿರ್ಮೂಲನೆ ಸೇರಿದಂತೆ ಕೆಲವು ಸಾಮಾಜಿಕ ಆವಶ್ಯಕತೆಗಳನ್ನು ಕೂಡ ಇಸ್ಲಾಂ ಝುಕಾತಿನ 8 ಹಕ್ಕುದಾರ ವಿಭಾಗದಲ್ಲಿ ಸೇರಿಸಿದೆ.

ಮೂರು: ಇಸ್ಲಾಮಿ ಆಡಳಿತಕ್ಕೆ ಝುಕಾತನ್ನು ನಿರಾಕರಿ-ಸುವ ವ್ಯಕ್ತಿಯ ಸೊತ್ತಿನಲ್ಲಿ ಅರ್ಧಾಂಶವನ್ನು ವಶಪಡಿಸಿ ಸಾರ್ವಜನಿಕ ಖಜಾನೆಗೆ ಜಮೆ ಮಾಡುವ ಅಧಿಕಾರವಿದೆ. ಇದರಿಂದ ಶ್ರೀಮಂತರು ಸಹಜವಾಗಿ ಅಥವಾ ನಿರ್ಬಂ-ಧಿತರಾಗಿ ಝುಕಾತ್ ಕೊಡಲು ಸಿದ್ಧರಾಗುತ್ತಾರೆ.

ಪ್ರವಾದಿ(ﷺ) ಯವರ ಹೇಳಿಕೆ ಹಾಗೂ ಅಬೂಬಕ್ಕ-ರ್(رضي الله عنه) ರವರ ನಿಲುವಿನಿಂದ ನಾವು ಇದನ್ನು ಅರ್ಥ-

ಮಾಡಿಕೊಳ್ಳಬಹುದು. ಪ್ರವಾದಿ(ﷺ) ಯವರು ಹೇಳುತ್ತಾರೆ. “ಪರಲೋಕದ ಪ್ರತಿಫಲದ ನಿರೀಕ್ಷೆಯನ್ನಿಟ್ಟು ಯಾರಾದರೂ ಅದನ್ನು ನೀಡದೆ ತಡೆದಿರಿಸಿದರೆ ನಾವು ಅದನ್ನು ವಶಪಡಿಸಿಕೊಳ್ಳಬಹುದು. ಅವನಿಗೆ ಸೇರಿದ ಅರ್ಧಭಾಗದ ಸೊತ್ತನ್ನು ಕೂಡ. ಇದು ನಮ್ಮ ರಬ್ಬಿನ ತೀರ್ಮಾನವಾಗಿದೆ. ಮುಹಮ್ಮದ್(ﷺ) ರ ಕುಟುಂಬಕ್ಕೆ ಇದರಲ್ಲಿ ಯಾವುದೂ ಧರ್ಮಸಮ್ಮತವಲ್ಲ.” (ಅಹ್ಮದ್, ಅಬೂದಾವೂದ್, ನಸಾಈ)

ಮೇಲಿನ ವಚನದ ಕೊನೆಯ ಭಾಗವು ಇಂತಹ ಕಠಿಣ ನಿಲುವು ಅಲ್ಲಾಹನ ತೀರ್ಮಾನವಾಗಿದೆಯೇ ಹೊರತು ಸ್ವಂತ ಕುಟುಂಬದ ಆದಾಯಕ್ಕಾಗಿ ಅಲ್ಲವೆಂದು ಸ್ಪಷ್ಟಪಡಿಸುತ್ತದೆ. ಅಥವಾ ಸಮುದಾಯದ ಅವಶ್ಯಕತೆಯೇ ಇಂತಹ ನಿಲುವಿಗೆ ಪ್ರೇರಕವಾಗಿದೆ.

ಅಬೂಬಕ್ಕರ್(ರ) ರವರ ನಿಲುವನ್ನು ನೋಡಿರಿ. “ಅಲ್ಲಾಹನ ಮೇಲಾಣೆ! ನಮಾಝ್ ಹಾಗೂ ಝಕಾತಿನ

ಮಧ್ಯೆ ತಾರತಮ್ಯ ಕಲ್ಪಿಸುವವರ ವಿರುದ್ಧ ಖಂಡಿತವಾಗಿಯೂ ನಾನು ಯುದ್ಧ ಘೋಷಿಸುತ್ತೇನೆ. ಏಕೆಂದರೆ ಝಕಾತ್ ಸೊತ್ತಿನ ಬಾಧ್ಯತೆಯಾಗಿದೆ. ಅಲ್ಲಾಹನ ಮೇಲಾಣೆ! ಅಲ್ಲಾಹನ ಸಂದೇಶವಾಹಕ(ﷺ) ರಿಗೆ ನೀಡಿದ ಒಂಟೆಯನ್ನು ಕಟ್ಟಿ ಹಾಕುವ ಹಗ್ಗವನ್ನು ನನಗೆ ನೀಡದೆ ತಡೆಹಿಡಿಯುವುದಾದರೆ ಅದರ ಹೆಸರಲ್ಲಿ ನಾನು ಯುದ್ಧ ಮಾಡುತ್ತೇನೆ." (ಬುಖಾರಿ ಮುಸ್ಲಿಂ)

ಝಕಾತ್ ಪಡೆಯಲು ಅರ್ಹತೆ ಇರುವ 8 ವಿಭಾಗವನ್ನು ಕುರ್ಆನ್ ವಿವರಿಸಿದೆ. "ಫಕೀರ್ (ದರಿದ್ರ), ಮಿಸ್ಕೀನ್ (ನಿರ್ಗತಿಕ), ಝಕಾತಿನ ಕಾರ್ಯದಲ್ಲಿ ಕೆಲಸ ಮಾಡುವವನು, ಮಾನಸಿಕವಾಗಿ ಇಸ್ಲಾಮಿಗೆ ನಿಕಟನಾದವನು, ಗುಲಾಮ ವಿಮೋಚನೆ, ಸಾಲದಿಂದ ತತ್ತರಿಸುವವನು, ಅಲ್ಲಾಹನ ಮಾರ್ಗದಲ್ಲಿ ಹೋರಾಡುವವನು, ಪ್ರಯಾಣಿಕ." (9:60).

ಇವರಲ್ಲಿ ಫಕೀರ್, ಮಿಸ್ಕೀನ್, ಗುಲಾಮ ವಿಮೋಚನೆ,

ಸಾಲಗಾರ ಪ್ರಯಾಣಿಕ ಮುಂತಾದವರು ಇಸ್ಲಾಮಿ ಸಮಾಜದ ಸಂರಕ್ಷಣೆಯ ಅಗತ್ಯವಿರುವವರಾಗಿದ್ದಾರೆ. ಝಕಾತ್ ವ್ಯವಸ್ಥೆಯ ಮೂಲಕ ಈ ವಿಭಾಗಗಳು ಸಂರಕ್ಷಿಸಲ್ಪಡುತ್ತವೆ. ಒಂದು ಶಾಶ್ವತವಾದ ವ್ಯವಸ್ಥೆ ಎಂಬ ನೆಲೆಯಲ್ಲಿ ಇಂತಹ ವಿಭಾಗಗಳಿಗೆ ಝಕಾತ್ ಸೆಲ್ಲಿನಿಂದ ಪರಿಹಾರ ಸಿಗುತ್ತದೆ. ಇದರಲ್ಲಿ ಪ್ರತಿಯೊಬ್ಬರಿಗೂ ಅವರ ಅಗತ್ಯವು ಪೂರ್ಣವಾಗಿ ಬಗೆಹರಿಯುವಂತೆ ಆಗಬೇಕು. ಆದರೆ ಎಲ್ಲಾ ವಿಭಾಗಗಳು ಒಂದೇ ಸಮಯದಲ್ಲಿ ಅಸ್ತಿತ್ವದಲ್ಲಿ ಇರದಿದ್ದರೆ ಇದ್ದವರಿಗೆ ಕೊಟ್ಟು ಸಮಸ್ಯೆ ಪರಿಹರಿಸಬೇಕು. ಫಕೀರ್, ಮಿಸ್ಕೀನ್, ಸಾಲಗಾರರು ಅವರ ಸ್ವಂತ ಕಾಲಲ್ಲಿ ನಿಲ್ಲಲು ಎಷ್ಟು ಅಗತ್ಯವಿದೆಯೋ ಅದನ್ನು ಕೊಡಬೇಕು. ಹೀಗೆ ಅವರು ಉಪಜೀವನಕ್ಕೆ ಸ್ವತಂತ್ರ ದಾರಿಯನ್ನು ಹುಡುಕಿಕೊಳ್ಳುಂತಾದರೆ ಮುಂದಿನ ವರ್ಷ ಅವರಿಂದಲೂ ಝಕಾತ್ ಪಡೆಯಬಹುದು. ಇಂತಹ ಒಂದು ಸಾಮಾಜಿಕ ಸಂರಕ್ಷಣೆ ಮುಸ್ಲಿಂ ಸಮುದಾಯದ

ಹೊಣೆಗಾರಿಕೆಯಾಗಿದೆ. ಆಡಳಿತ ವ್ಯವಸ್ಥೆ ಇಲ್ಲದಿದ್ದರೂ ಇದನ್ನು ನಿರ್ವಹಿಸಲು ಸಾಧ್ಯವಿದೆ.

ಶಾಫಿಈ ಮದ್‌ಹಬಿನ ವಿದ್ವಾಂಸರು ಇದಕ್ಕೆ ಪುರಾವೆಯಾಗಿ 'ಖಬೀಸ'ದ ಘಟನೆಯನ್ನು ಉಲ್ಲೇಖಿಸುತ್ತಾರೆ. ಒಮ್ಮೆ ಪ್ರವಾದಿ(ﷺ) ಯವರು ಹೇಳಿದರು: "ಮೂರು ವಿಭಾಗದವರು ಮಾತ್ರ ಇತರರೊಂದಿಗೆ ಬೇಡಬಹುದು. ಇತರರ ಸಾಲವನ್ನು ತೀರಿಸುವ ಜವಾಬ್ದಾರಿ ವಹಿಸಿ ಅದನ್ನು ಸಂದಾಯ ಮಾಡಲು ಸಾಧ್ಯವಾಗದ ವ್ಯಕ್ತಿ ಅದನ್ನು ಪಾವತಿಸುವ ತನಕ ಇತರರ ಸಹಾಯವನ್ನು ಬೇಡಬಹುದು. ಅಗತ್ಯವು ಪೂರ್ಣವಾದ ನಂತರ ಈ ಬೇಡುವಿಕೆಯನ್ನು ಕೊನೆಗೊಳಿಸಬೇಕು. ದುರ್ಘಟನೆಯ ನಿಮಿತ್ತ ಆಸ್ತಿಯೆಲ್ಲವೂ ನಾಶವಾಗಿ ದಿವಾಳಿಯಾದವನು ಅಸ್ತಿತ್ವಕ್ಕೆ ಅಗತ್ಯವಿರುವಷ್ಟು ಬೇರೆಯವರಿಂದ ಬೇಡಬಹುದು. ಅತೀವ ಬಡತನದಿಂದ ಕಂಗಾಲಾಗಿರುವ ವ್ಯಕ್ತಿ ಕೂಡ ಇತರರಿಂದ ಬೇಡಬಹುದು. ಈ ವ್ಯಕ್ತಿಯ ಕಾ-

ರ್ಯದಲ್ಲಿ ಸಮುದಾಯದಲ್ಲಿರುವ ಮೂವರು ಜವಾಬ್ದಾರಿಯುತ ವ್ಯಕ್ತಿಗಳು ಸಾಕ್ಷಿ ನುಡಿಯುವುದಾದರೆ (ಅಂದರೆ ಅವರು ಬಡತನದ ಬೇಗೆಯಲ್ಲಿ ಇರುವುದನ್ನು ಸಮರ್ಪಿಸಿದರೆ) ಅಂಥವನು ತನ್ನ ಅಗತ್ಯಗಳನ್ನು ಪೂರ್ತಿಗೊಳಿಸುವ ತನಕ ಇತರರೊಂದಿಗೆ ಸಹಾಯ ಕೋರಬಹುದು. ಇದಕ್ಕೆ ಹೊರತಾದ ಬೇಡುವಿಕೆಗಳೆಲ್ಲವೂ ತಪ್ಪು. ಅವರು ತಿನ್ನುವುದು ಮ್ಲೇಚ್ಛವಾಗಿದೆ." (ಮುಸ್ಲಿಂ)

ಮೇಲಿನ ಹದೀಸ್‌ನಿಂದ ಒಬ್ಬನಿಗೆ ತನ್ನ ಅವಶ್ಯಕತೆಗಳನ್ನು ಪೂರೈಸುವಷ್ಟು ಪಾಲನ್ನು ಝಕಾತ್‌ನಿಂದ ಪಡೆಯಬಹುದೆಂದು ಸ್ಪಷ್ಟವಿದೆ. ವ್ಯಾಪಾರಿಗೆ ವ್ಯಾಪಾರ ಮಾಡಲು ಅಗತ್ಯವಿರುವಷ್ಟು, ಕಾರ್ಮಿಕರಿಗೆ ಉದ್ಯೋಗದಲ್ಲಿ ತೊಡಗಲು ಅಗತ್ಯವಿರುವಷ್ಟು ಹಾಗೂ ಇನ್ನಿತರ ಕ್ಷೇತ್ರದಲ್ಲಿರುವವರಿಗೆ ಅವರ ಅಗತ್ಯಾನುಸಾರ ನೀಡಬೇಕಾಗಿದೆ. (ಶರಹುಲ್ ಮುಹದ್ದಬ್)

ವ್ಯಾಪಾರ, ಉದ್ಯೋಗ ಮಾಡಲು ಅಸಾಧ್ಯವಾಗಿರುವ

ವೃದ್ಧರು, ಅಂಗವಿಕಲರು, ಇತರರನ್ನು ಆಶ್ರಯಿಸಿ ಮಾತ್ರ ಬದುಕುವ ಸಾಧ್ಯತೆ ಇರುವ ವಿಕಲಾಂಗರು, ಮಾರಕ ರೋಗಗಳು ಮತ್ತು ವಿಧವೆಯರಾಗಿದ್ದರೆ ಈ ನಿಲುವಿನ ಪ್ರಕಾರ ಅವರಿಗೆ ಝಕಾತ್ ನಿಧಿಯಿಂದ ಜೀವನಪ-ರ್ಯಂತ ಪೆನ್ಷನ್ ಅನುಮತಿಸುವುದು ಝಕಾತ್ ಜಾ-ರಿಗೊಳಿಸುವ ರೂಪವಾಗಿದೆ. ಏನಿದ್ದರೂ ಉಮರ್(﵁) ಹೇಳುವಂತೆ, ಅವರಿಗೆ ನೀಡುವುದರಿಂದ ಅವರನ್ನು ಸ್ವಯಂ ಪರ್ಯಾಪ್ತರನ್ನಾಗಿ (ದುಡಿದು ತಿನ್ನಲು) ಮಾಡಿರಿ.

ಇಸ್ಲಾಮಿನಲ್ಲಿ ಝಕಾತ್ ವ್ಯವಸ್ಥೆ ಅದರ ಸಮಗ್ರ ರೂ-ಪದಲ್ಲಿ ಜಾರಿಯಾದರೆ ಝಕಾತ್ ಪಡೆಯುವ ಜನರು ಇರದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇತಿಹಾ-ಸವು ಇದಕ್ಕೆ ಸಾಕ್ಷಿಯಾಗಿದೆ. ಖಲೀಫಾ ಉಮರ್(﵁) ರವರ ಕಾಲದಲ್ಲಿ ಮುಆದ್(﵁) ರನ್ನು ಯಮನ್ ದೇಶದ ರಾಜ್ಯಪಾಲರಾಗಿ ನೇಮಿಸಲಾಯಿತು. ಅವರು ಅಲ್ಲಿಂದ ಝಕಾತಿನ ಮೂರನೇ ಒಂದು ಪಾಲನ್ನು

ಉಮರ್(ؓ) ರಿಗೆ ಕಳುಹಿಸಿಕೊಟ್ಟರು. ಆಗ ಉಮರ್ ಹೇಳುತ್ತಾರೆ, "ನಾನು ನಿಮ್ಮನ್ನು ಸುಂಕ ಮತ್ತು ಜಿಝಿಯಾ ವಸೂಲು ಮಾಡಿ ಕಳುಹಿಸುವ ಉದ್ದೇಶದಿಂದ ನೇಮಿ-ಸಿಲ್ಲ. ಬದಲಾಗಿ ಶ್ರೀಮಂತರಿಂದ ಝಕಾತ್ ಸಂಗ್ರ-ಹಿಸಿ ಅಲ್ಲಿರುವ ಬಡವರಿಗೆ ವಿತರಿಸಬೇಕೆಂದಾಗಿದೆ." ಮುಆದ್(ؓ) ಹೀಗೆ ಉತ್ತರಿಸಿದರು, "ಇಲ್ಲಿ ಝಕಾತ್ ಸ್ವೀಕರಿಸುವವರು ಯಾರು ಇಲ್ಲದ ಕಾರಣ ನಿಮಗೆ ಕಳು-ಹಿಸಿಕೊಟ್ಟಿದ್ದೇನೆ."

ಮುಂದಿನ ವರ್ಷ ಮುಆದ್(ؓ) ಅರ್ಧಭಾಗ ಕಳು-ಹಿಸಿಕೊಟ್ಟರು. ಆಗಲೂ ಇದೇ ರೀತಿಯ ಪ್ರತಿಕ್ರಿಯೆ ಉಂಟಾಯಿತು. ಮೂರನೇ ವರ್ಷ ಝಕಾತ್ತಿನ ಎಲ್ಲಾ ಸೊತ್ತುಗಳನ್ನು ಉಮರ್(ؓ) ರಿಗೆ ಕಳುಹಿಸಿಕೊಟ್ಟ-ರು. ಉಮರ್ ಮೊದಲಿನಂತೆಯೇ ಪ್ರತಿಕ್ರಿಯಿಸಿದಾಗ ಮುಆದ್(ؓ) ಹೇಳಿದರು, "ನನಗೆ ಇಲ್ಲಿ ಝಕಾತ್ ಪಡೆಯುವ ಏಕೈಕ ವ್ಯಕ್ತಿಯೂ ಸಿಕ್ಕಿಲ್ಲ." (ಕಿತಾಬುಲ್

ಅಮ್ವಾಲ್ 596) ಇಸ್ಲಾಮಿ ಸಮುದಾಯದ ಪೌರರು ಎಷ್ಟರಮಟ್ಟಿಗೆ ಸಮಾಜದ ಆರ್ಥಿಕ ಸುರಕ್ಷತೆ ಹಾಗೂ ಸಂರಕ್ಷಣೆ ಪಡೆಯುತ್ತಾರೆಂದು ಇದರಿಂದ ಸ್ಪಷ್ಟವಾಗುತ್ತದೆ.

ಆಫ್ರಿಕನ್ ರಾಷ್ಟ್ರಗಳಲ್ಲಿ ರಾಜ್ಯಪಾಲರಾಗಿ ನೇಮಿಸಲಾದ ಯಹ್ಯಾ ಬಿನ್ ಸಈದ್ ಝಕಾತ್ ಸ್ವೀಕರಿಸುವ ಬಡವರು ಇಲ್ಲದ ಪರಿಸ್ಥಿತಿ ನಿರ್ಮಾಣವಾದಾಗ ಆ ಹಣವನ್ನು ಅಲ್ಲಿಯ ಗುಲಾಮರ ವಿಮೋಚನೆಗಾಗಿ ಉಪಯೋಗಿಸಿದರು. ಇದು ಉಮರ್ ಬಿನ್ ಅಬ್ದುಲ್ ಅಜೀಜ್(ﷺ) ರ ಕಾಲದಲ್ಲಿ ನಡೆದ ಘಟನೆಯಾಗಿತ್ತು. ಇದೇ ಕಾಲದಲ್ಲಿ ಇರಾಕಿನ ಜನತೆ ಸಾಲ ಬಾಧ್ಯತೆಗಳನ್ನು ಮುಗಿಸಿ ವಿವಾಹದ ಅಗತ್ಯವಿರುವವರಿಗೆ ಅದರಿಂದ ಸಹಾಯ ಮಾಡಲಾಯಿತು. (ಅಲ್ ಅಮ್ವಾಲ್ 256)

ಪ್ರವಾದಿ(ﷺ) ಯವರು ಮೇಲೆ ವಿವರಿಸಿದ ರೀತಿಯಲ್ಲಿ ಜನರ ಅಗತ್ಯಗಳನ್ನು ಪೂರೈಸುವ ವಿಧದಲ್ಲಿರುವ

ಝುಕಾತ್ ವ್ಯವಸ್ಥೆ ಜಾರಿಯಾಗುತ್ತದೆ ಎಂದು ಭವಿಷ್ಯ ನುಡಿದಿದ್ದರು.

"ನೀವು ದಾನ (ಝುಕಾತ್) ಮಾಡಿರಿ. ಜನರು ಝುಕಾತ್ ಪಡೆಯಲು ಅರ್ಹರಾದವರ ಹುಡುಕಾಟದಲ್ಲಿ ನಿರತ-ರಾಗುವ ಒಂದು ಕಾಲ ನಿಶ್ಚಯವಾಗಿಯೂ ಬರಲಿದೆ. ಅಂದು ಜನರು ಹೀಗೆನ್ನುವರು, "ತಾವು ನಿನ್ನೆ ತಂದಿದ್ದರೆ ನಾನು ಅದನ್ನು ಸ್ವೀಕರಿಸುತ್ತಿದೆ. ಆದರೆ ಇಂದು ನನಗೆ ಅದರ ಅಗತ್ಯವಿಲ್ಲ." (ಬುಖಾರಿ) ನನಗೆ ಅಗತ್ಯವಿಲ್ಲವೆಂ-ದು ಅವರು ಹೇಳಲು ಕಾರಣ ಅವರ ಸ್ವಯಂ ಪರ್ಯಾ-ಪ್ತತೆಯಾಗಿದೆ. ಅವರು ಅವರ ಕಾಲ ಮೇಲೆ ನಿಂತಿರು-ವುದರಿಂದ ಇತರರ ಸಹಾಯ ಅಗತ್ಯವಿಲ್ಲ ಎಂದರ್ಥ.

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014
MOB: 9731593091 / 9945171612

Jamiyathe Ahle Hadees Mangalore